ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	2214
ಸದಸ್ಯರ ಹೆಸರು	ಶ್ರೀ ಅರವಿಂದ ಕುಮಾರ್ ಅರಳಿ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	31.03.2020 (ಕಲಾಪವನ್ನು ಮುಂದೂಡಲಾಗಿದೆ)
ಉತ್ತರಿಸುವವರು	ಮಾನ್ಯ ನಗರಾಭಿವೃದ್ಧಿ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ಬೀದರ್ ನಗರ ಸಭೆಗೆ ಹೊಸದಾಗಿ ಕಟ್ಟಡ ನಿರ್ಮಾಣ ಮಾಡಲು 2016-17ರಲ್ಲಿ ಸರ್ಕಾರ 5.00 ಕೋಟಿ ರೂಪಾಯಿ ಮಂಜೂರು ಮಾಡಲಾಗಿದ್ದು ಅದಕ್ಕಾಗಿ ನಿವೇಶನ ಎಲ್ಲಿ ಗುರುತು ಮಾಡಲಾಗಿದೆ; ಮಾಡಲಾಗಿದ್ದಲ್ಲಿ, ಕಟ್ಟಡದ ಕಾಮಗಾರಿ ಪ್ರಾರಂಭ ಮಾಡುವುದು ಯಾವಾಗ;	ಬೀದರ್ ನಗರ ಸಭೆ ಕಛೇರಿ ಕಟ್ಟಡ ನಿರ್ಮಾಣಕ್ಕಾಗಿ ರೂ. 500.00 ಲಕ್ಷಗಳನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ /161/ಎಸ್‌ಎಫ್‌ಸಿ/2017(ಭಾಗ-2), ದಿನಾಂಕ: 08-08-2017ರಲ್ಲಿ ಮಂಜೂರು ಮಾಡಿದ್ದು, ಮಂಜೂರು ಮಾಡಲಾದ ಅನುದಾನದಲ್ಲಿ ರೂ. 250.00 ಲಕ್ಷಗಳನ್ನು ಸರ್ಕಾರದ ಆದೇಶ ಸಂಖ್ಯೆ: ನಅಇ 01 ಎಸ್.ಎಫ್.ಸಿ 2018, ದಿನಾಂಕ: 12.01.2018 ರಲ್ಲಿ ನಗರಸಭೆಗೆ ಬಿಡುಗಡೆ ಮಾಡಲಾಗಿದೆ. ಬೀದರ್ ನಗರಸಭೆ ಕಛೇರಿ ಹಾಗೂ ಜಿಲ್ಲಾಧಿಕಾರಿ ಕಛೇರಿ ಕಟ್ಟಡವು ಹರಳಯ್ಯ ವೃತ್ತದಿಂದ ಡಾ||ಬಿ.ಆರ್. ಅಂಬೇಡ್ಕರ್ ವೃತ್ತಕ್ಕೆ ಹೋಗುವ ರಸ್ತೆಯಲ್ಲಿ ಅಕ್ಕಪಕ್ಕದಲ್ಲಿರುತ್ತವೆ. ಇವುಗಳೆರಡು ಸ್ಥಳಗಳನ್ನು ಸೇರಿಸಿ ಜಿಲ್ಲಾಡಳಿತ ಭವನ ಮಾಡುವ ವಿಚಾರ ಪರಿಶೀಲನೆಯಲ್ಲಿರುತ್ತದೆ. ಅದೇ ರೀತಿಯಾಗಿ ಜಿಲ್ಲಾಡಳಿತ ಭವನ ಕಟ್ಟಡಕ್ಕಾಗಿ ಇತರೆ ಸ್ಥಳಗಳನ್ನು ಸಹ ಗುರುತಿಸುವ ಪ್ರಕ್ರಿಯೆ ನಡೆದಿರುತ್ತದೆ. ಜಿಲ್ಲಾಡಳಿತ ಭವನವನ್ನು ಈಗಿನ ಸ್ಥಳದಲ್ಲಿಯೇ ಅಥವಾ ಹೊಸ ಜಾಗ ಗುರುತಿಸಿ ಕಟ್ಟಡ ಕಟ್ಟುವ ಬಗ್ಗೆ ಅಂತಿಮವಾಗಿ ತೀರ್ಮಾನ ಆಗಿರುವುದಿಲ್ಲ. ಇದರಿಂದಾಗಿ ನಗರಸಭೆಯ ಕಟ್ಟಡವನ್ನು ಈಗ ಇರುವ ನಗರಸಭೆ ಕಛೇರಿ ಸ್ಥಳದಲ್ಲಿಯೇ ನಿರ್ಮಿಸಬೇಕೇ ಅಥವಾ ಬೇರೆ ಸ್ಥಳದಲ್ಲಿ ನಿರ್ಮಿಸಬೇಕೇ ಎಂಬ ಬಗ್ಗೆ ಸೂಕ್ತ ತೀರ್ಮಾನ ಮಾಡಲು ವಿಳಂಬವಾಗಿರುತ್ತದೆ
ಆ)	ನಿವೇಶನವಿಲ್ಲದಿದ್ದಲ್ಲಿ, ಯಾವಾಗ ನಿವೇಶನ ನೀಡಲು ಕ್ರಮ ಕೈಗೊಳ್ಳುವುದು?	ಜಿಲ್ಲಾಡಳಿತ ಭವನ ಕಟ್ಟಡ ಕಟ್ಟಲು ಜಾಗ ಗುರುತಿಸುವ ಪ್ರಕ್ರಿಯೆ ಶೀಘ್ರದಲ್ಲಿಯೇ ಅಂತಿಮವಾಗಲಿದ್ದು, ಅದರಂತೆಯೇ ನಗರಸಭೆಯ ಕಟ್ಟಡ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

ಸಂಖ್ಯೆ: ನಅಇ 192 ಎಸ್.ಎಫ್.ಸಿ. 2020

(ಬಿ.ಎ. ಬಸವರಾಜ)
ನಗರಾಭಿವೃದ್ಧಿ ಸಚಿವರು.